ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 14-20
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸ್ವಾತಂತ್ರ್ಯ ಹೋರಾಟದಲ್ಲಿ ಶಕುಂತಲಾ ಕುರ್ತುಕೋಟಿಯವರ ಪಾತ್ರ

**ಡಾ. ಅನಿತ ಟಿ**

ಇತಿಹಾಸ ಉಪನ್ಯಾಸಕರು, ಬಿ.ಎ ಆನರ್ಸ್ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

***Abstract:***

*ಭಾರತದ ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಹಲವಾರು ಚಳುವಳಿಗಳು ನಡೆದು ಅವು ಇಂದು ನೆನಪಿನ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಉಳಿದಿವೆ, ಹಾಗೆಯೆ ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ ಮುಖ್ಯವಾಹಿನಿಗೆ ಬರದೆ ಅದೆಷ್ಟೋ ಹೋರಾಟಗಾರರು ಇದ್ದಾರೆ. ಅಂತವರುಗಳನ್ನು ನೆನಪು ಮಾಡಿಕೊಳ್ಳಲು ಮತ್ತು ಅವರ ಕೊಡುಗೆಗಳನ್ನು ಸ್ಮರಿಸಲು ಒಂದು ವೇದಿಕೆಯನ್ನು ಕಲ್ಪಿಸಿಕೊಟ್ಟಿರುವುದು ಹೆಮ್ಮೆಯ ಸಂಗತಿ. ಬೆಳಗಾವಿಯಲ್ಲಿ ನಡೆದ ಗಾಂಧೀಜೀಯವರ ಅಧ್ಯಕ್ಷತೆಯಲ್ಲಿನ ಕಾಂಗ್ರೆಸ್ ಸಮಾವೇಶದ ಹಿನ್ನಲೆಯಲ್ಲಿ ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೀಮತಿ ಶಕುಂತಲಾ ಕುರ್ತುಕೋಟಿಯವರ ಪಾತ್ರ ಮತ್ತು ಅವರ ಕೊಡುಗೆಗಳ ಬಗ್ಗೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

**Keywords:** *ಬೆಳಗಾವಿ, ಮಹಾತ್ಮ ಗಾಂಧೀಜಿ, ಸ್ವಾತಂತ್ರ್ಯ ಹೋರಾಟ, ಶಕುಂತಲಾ ಕುರ್ತುಕೋಟಿ.*

**ಪೀಠಿಕೆ**

ಕರ್ನಾಟಕದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು ಎಂಬ ವಿಷಯವನ್ನು ಸಂಶೋಧನೆ ಅಥವಾ ಬರವಣಿಗೆಯ ಹಿನ್ನಲೆಯಲ್ಲಿ ಕೈಗೆತ್ತಿಕೊಂಡಾಗ ಇತಿಹಾಸದಲ್ಲಿ ದಾಖಲಾದ ಅನೇಕ ವೀರವನಿತೆಯರನ್ನು ನಾವು ಗುರ್ತಿಸಬಹುದು. ಅಂತಹವರುಗಳಲ್ಲಿ ಕಿತ್ತೂರುರಾಣಿ ಚೆನ್ನಮ್ಮ, ಉಮಾಬಾಯಿ ಕುಂದಾಪುರ, ಯಶೋಧರ ದಾಸಪ್ಪ, ನಾಗಮ್ಮ ಪಾಟೀಲ್, ಕಮಲಾದೇವಿ ಚಟ್ಟೋಪಾಧ್ಯಾಯ, ಬಳ್ಳಾರಿ ಸಿದ್ದಮ್ಮ, ಬೆಳವಡಿ ಮಲ್ಲಮ್ಮ, ಪದ್ಮಾವತಿ ಬಿದರಿ, ಶಕುಂತಲಾ ಕುರ್ತುಕೋಟಿ, ಟಿ ಸುನಂದಮ್ಮ ಹೀಗೆ ಬೆರಳೆಣಿಕೆಯಷ್ಟು ಮಹಿಳಾ ಹೋರಾಟಗಾರರು ಮಾತ್ರ ಇತಿಹಾಸದ ದಾಖಲೆಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಇವರ ಹೋರಾಟದ ಹಿನ್ನಲೆಯಲ್ಲಿ ತಾವು ಕಳೆದುಕೊಂಡ ಸರ್ವಸ್ವ ಹಾಗೂ ಹೋರಾಟದ ಭಾಗವಾಗಿ ಅನುಭವಿಸಿದ ಶಿಕ್ಷೆ ಇವುಗಳನ್ನು ಗಮನಿಸಿದಾಗ ಯಾವ ಪುರುಷನಿಗೂ ಕಡಿಮೆ ಇಲ್ಲದಂತೆ ಇವರು ಸಹ ಹೋರಾಟವನ್ನು ಮಾಡಿದ್ದಾರೆ ಎಂಬುದು ಮನದಟ್ಟಾಗುತ್ತದೆ.

ವೀರ ಧೀರ ಹಾಗೂ ಶೌರ್ಯದ ಸಂಕೇತವಾಗಿ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದವರ ಸಾಲಿನಲ್ಲಿ ಸೇರಬಹುದಾದ ಶಕುಂತಲಾ ಕುರ್ತುಕೋಟಿ ಅವರ ಜೀವನಗಾಥೆಯೇ ಒಂದು ದಾರಿದೀಪ ಎನಿಸುತ್ತದೆ. ಹೋರಾಟಗಾರ್ತಿ ಹಾಗೂ ಸಮಾಜ ಸುಧಾರಕಿಯಾದ ಇವರು 1921ರಲ್ಲಿ ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ ಜನಿಸಿದರು. ಇವರ ತಂದೆ ಮಿಲಿಟರಿಯಲ್ಲಿ ಮೇಲ್ವಿಚಾರಕರ ಹುದ್ದೆಯಲ್ಲಿದ್ದವರು. ತಾಯಿ ಕೂಡ ದೇಶ ಅಭಿಮಾನಿ

***Please cite this article as:*** ಅನಿತ, ಟಿ. (2025). ಸ್ವಾತಂತ್ರ್ಯ ಹೋರಾಟದಲ್ಲಿ ಶಕುಂತಲಾ ಕುರ್ತುಕೋಟಿಯವರ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(1), 14–20

ಹಾಗೂ ಕಾಂಗ್ರೆಸ್ಸಿನ ಸದಸ್ಯರಾಗಿದ್ದರು. ಬಾಲಗಂಗಾಧರ ತಿಲಕರ ಅಭಿಮಾನಿಯಾಗಿದ್ದ ಇವರ ತಾಯಿ ತಿಲಕರ ವಿಚಾರಧಾರೆಗಳಿಂದ ಸಾಕಷ್ಟು ಪ್ರಭಾವಿತರಾಗಿದ್ದರು. ಮನೆಯಲ್ಲಿನ ಈ ಸ್ವಾತಂತ್ರ್ಯ ಹೋರಾಟದ ಪ್ರಭಾವವು ಸಾಮಾನ್ಯವಾಗಿ ಇವರ ಮೇಲೆಯೂ ಉಂಟಾಯಿತು.[1] ತಿಲಕವಾಡಿಯಲ್ಲಿ ಐಡಿಯಲ್ ಕೋಚಿಂಗ್ ಕ್ಲಾಸಸ್ ಹಾಗೂ ಬಾಲಿಕಾ ಆದರ್ಶ ವಿದ್ಯಾಲಯ ಎಂಬ ರಾಷ್ಟ್ರೀಯ ಶಾಲೆ ನಡೆಯುತ್ತಿತ್ತು. ಈ ಶಾಲೆಗೆ ಸೇರಿದ ಶಕುಂತಲಾರವರು ಸಾಮಾನ್ಯ ವಿಷಯಗಳ ಜೊತೆ ಜೊತೆಗೆ ನಮ್ಮ ದೇಶದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿ ಮತ್ತು ಅದಕ್ಕೆ ಪೂರಕವಾಗಿ ಐರ್ಲಾಂಡ್ ದೇಶದ ಸ್ವಾತಂತ್ರ್ಯದ ಇತಿಹಾಸ, ಫ್ರಾನ್ಸ್ ಹಾಗೂ ರಷ್ಯಾ ದೇಶಗಳ ಕ್ರಾಂತಿ ಮತ್ತು ಅಮೇರಿಕಾದ ಚಳುವಳಿಗಳ ಬಗ್ಗೆ ಶಾಲೆಯಲ್ಲಿ ಮಾಹಿತಿ ನೀಡುತ್ತಿದ್ದರು. ಇದರ ಜೊತೆಗೆ ಸಂಜೆಯ ವೇಳೆಯಲ್ಲಿ ಶಾರೀರಿಕ ಶಿಕ್ಷಣವನ್ನು ನೀಡುತ್ತಿದ್ದರು. ಇಂತಹ ವಾತವರಣದಲ್ಲಿ ಬೆಳೆಯುತ್ತಿದ್ದ ಶಕುಂತಲಾರವರು ದೇಶದ ಸ್ವಾತಂತ್ರ್ಯ ಹೋರಾಟದ ಬಗೆಗಿನ ಉತ್ಸಾಹ ಸಹಜವಾಗಿಯೇ ಮೂಡಿತು. ಚಿಕ್ಕ ವಯಸ್ಸಿನಿಂದಲೇ ಶಕುಂತಲರವರು ಭಾರತೀಯ ಸ್ವಾತಂತ್ರ್ಯ ಹೋರಾಟದಿಂದ ಪ್ರೇರೇಪಿತರಾಗಿದ್ದರು. ಹಾಗೂ ಸ್ವಾತಂತ್ರ್ಯ ಹೋರಾಟದ ಬಗ್ಗೆ ಅನೇಕ ವಿಚಾರಗಳನ್ನು ಸೂಕ್ಷ್ಮವಾಗಿ ಸಂಗ್ರಹಿಸುತ್ತಿದ್ದರು.

ಪ್ರೌಢಾವಸ್ಥೆಗೆ ಬಂದ ಮೇಲೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ಇನ್ನೂ ತೀವ್ರವಾದ ಆಸಕ್ತಿ ಇವರಲ್ಲಿ ಬೆಳೆಯಿತು. ಹಾಗಾಗಿ ಹದಿಹರೆಯದವರಿದ್ದಾಗಲೇ ಚಳುವಳಿಗೆ ಸೇರಿದ್ದರು. ಶಕುಂತಲಾರವರು ವಾಸವಿದ್ದ ಬೀದಿಯಲ್ಲಿಯೇ ದೇಶಭಕ್ತಿಗೆ ಹೆಸರಾದ ಯಾಳಗಿ ಮನೆತನವಿತ್ತು. ಇಲ್ಲಿಗೆ ಸ್ವಾತಂತ್ರ್ಯ ಹೋರಾಟಗಾರರಾದ ಗಂಗಾಧರರಾವ್ ದೇಶಪಾಂಡೆ, ಜವಹಾರಲಾಲ್ ನೆಹರೂ ಇನ್ನು ಮುಂತಾದ ಮುಖಂಡರು ಸ್ವಾತಂತ್ರ್ಯ ಹೋರಾಟದ ಕುರಿತು ಅನೇಕ ವಿಚಾರಗಳನ್ನು ಚರ್ಚಿಸಲು ಸೇರುತ್ತಿದ್ದರು. ರಮಾಭಾಯಿ ಯಾಳಗಿಯವರ 1940ರಲ್ಲಿನ ವೈಯಕ್ತಿಕ ಸತ್ಯಾಗ್ರಹವನ್ನು ಗಮನಿಸಿದ ಶಕುಂತಲಾರವರು ಆ ದಿನದಿಂದಲೇ ದೇಶಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಳ್ಳುವ ನಿರ್ಧಾರವನ್ನು ಕೈಗೊಂಡರು. ಮಹಿಳಾ ಹಕ್ಕುಗಳ ಪರವಾಗಿದ್ದ ಶಕುಂತಲಾರವರು ಬ್ರಿಟಿಷರ ವಿರುದ್ಧ ಮಹಿಳೆಯರನ್ನು ಸಂಘಟಿಸುವ ಮತ್ತು ಸಿದ್ಧಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಇವರ ಹೋರಾಟದ ಸಂಕಲ್ಪ ಎಷ್ಟಿತ್ತೆಂದರೆ ಇವರನ್ನು ಬ್ರಿಟಿಷ್ ಅಧಿಕಾರಿಗಳು ಹಲವು ಭಾರಿ ಬಂಧಿಸಿ ಜೈಲಿಗೆ ಹಾಕಿದರು ಮತ್ತೆ ಮತ್ತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದನ್ನು ತಡೆಯಲಾಗಲಿಲ್ಲ. ಆಕೆಯ ಈ ಧೈರ್ಯ ಮತ್ತು ಸದೃಢತೆ ಭಾರತೀಯ ಸ್ವಾತಂತ್ರ್ಯ ಹೋರಾಟದ ಬಗ್ಗೆ ಅವರಿಗಿದ್ದ ಬದ್ಧತೆಯನ್ನು ತೋರಿಸುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿದ್ದ ಇವರು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತ ಮಹಿಳೆಯರಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಮಹಿಳೆಯರ ಮೇಲಿನ ಸಾಮೂಹಿಕ ಅನ್ಯಾಯಗಳ ವಿರುದ್ಧ ಹಲವಾರು ಮೆರವಣಿಗೆಗಳು ಮತ್ತು ಪ್ರತಿಭಟನೆಗಳನ್ನು ಸಂಘಟಿಸುವ ಹಾಗೂ ಅವರನ್ನು ತಮ್ಮೊಂದಿಗೆ ಮುನ್ನಡೆಸುವ ಕೆಲಸ ಮಾಡಿದ್ದರು. ಮಹಿಳೆಯರಿಗೆ ಶಿಕ್ಷಣದ ಮಹತ್ವ ತಿಳಿಸುವ ಮೂಲಕ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಿದ್ದರು. ಬಾಲಕಿಯರು ಮತ್ತು ಮಹಿಳೆಯರಿಗೆ ಶಿಕ್ಷಣದ ಪ್ರವೇಶವನ್ನು ಸುಧಾರಿಸಲು ಸಾಕಷ್ಟು ಶ್ರಮಿಸಿದರು.[2]

[1] ಕುಲಕರ್ಣಿ ಆರ್.ಎಚ್. (1992). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ*. ವೆಂಕಟೇಶ್ವರ ಪ್ರಕಾಶನ.

[2] ನಾಗರತ್ನಮ್ಮ ಎಸ್. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರೀಕ ಕಾನೂನು ಭಂಗ ಚಳುವಳಿ*. ದೇಶಿ ಪುಸ್ತಕ ಪ್ರಕಾಶನ.

ಶಕುಂತಲಾರವರ ತಾಯಿ ಸ್ವದೇಶಿ ವಸ್ತುಗಳನ್ನೇ ಬಳಸುವುದರಿಂದ ಸದೃಢ ದೇಶ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂಬ ನಿಲುವನ್ನು ಹೊಂದಿದ್ದರು. ಹಾಗಾಗಿ ಸ್ವದೇಶಿ ವಸ್ತುಗಳನ್ನೇ ಬಳಸುವುದಾಗಿ ಪ್ರತಿಜ್ಞೆ ಮಾಡಿದ್ದರು. ವಿದೇಶಿ ವಸ್ತುಗಳ ಬಹಿಷ್ಕಾರ ಸಂದರ್ಭದಲ್ಲಿ ಅನೇಕ ಬೆಲೆಬಾಳುವ ಸೀರೆಗಳನ್ನು ಹಾಗೂ ವಸ್ತುಗಳನ್ನು ಸುಟ್ಟು ಹಾಕಿದರು ಈ ಘಟನೆ ಶಕುಂತಲಾರವರ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ರಾಷ್ಟ್ರದಲ್ಲಿ ನಡೆಯುತ್ತಿದ್ದ ಅನೇಕ ವಿಚಾರಧಾರೆಗಳನ್ನು ತಿಳಿದುಕೊಳ್ಳುವ ಸಲುವಾಗಿ ಕೇಸರಿ ಮತ್ತು ಹರಿಜನ ಪತ್ರಿಕೆಗಳನ್ನು ನಿಯಮಿತವಾಗಿ ಹಂಚಲು ಚಂದಾದಾರಾಗಿದ್ದರು. ಇದು ಪತ್ರಿಕೆಗಳ ಮೇಲಿನ ಆಸಕ್ತಿಯನ್ನು ತೋರಿಸುತ್ತದೆ. ಚಿಕ್ಕದಂದಿನಿಂದಲೂ ಕೇಸರಿ ಮತ್ತು ಹರಿಜನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳನ್ನ ಒದುತ್ತಾ ಬೆಳೆದ ಶಕುಂತಲಾರವರಿಗೆ ಸ್ವಾತಂತ್ರ್ಯ ಹೋರಾಟದ ಕರೆಗೆ ತುದಿಗಾಲಿನಲ್ಲಿ ನಿಲ್ಲುವಂತೆ ಪ್ರೇರಣೆ ನೀಡುತ್ತಿದ್ದವು. ಈ ಹಿನ್ನಲೆಯಲ್ಲಿ ಶಕುಂತಲಾರವರು ಸಂಪೂರ್ಣವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಲು ಸಿದ್ದರಾದರು. 1942ರಲ್ಲಿ ಬೆಳಗಾವಿಯಲ್ಲಿ ಸ್ವಾತಂತ್ರ್ಯ ಚಳುವಳಿಯ ಹೋರಾಟದ ಜ್ವಾಲೆ ಎದ್ದಿದ್ದ ಸಂದರ್ಭದಲ್ಲಿ ಮಹಿಳೆಯರನ್ನು ಹೋರಾಟಕ್ಕೆ ಎಚ್ಚರಿಸುವ ಕೆಲಸ ಕೈಗೊಂಡು ಸ್ವಾತಂತ್ರ್ಯ ಹೋರಾಟದ ಬಗ್ಗೆ ಅರಿವು ಮೂಡಿಸಿದರು. 1942ರಲ್ಲಿ ನಡೆದ ವೈಯಕ್ತಿಕ ಸತ್ಯಾಗ್ರಹ ಹೋರಾಟದಲ್ಲಿ ಬೆಳಗಾವಿ ಜಿಲ್ಲೆಯು ಮುಂಚೂಣಿಯಲ್ಲಿತ್ತು. ಅರವಿಂದ ಯಾಳಗಿಯವರು ಸಹ ತಮ್ಮ ವೈಯಕ್ತಿಕ ಸತ್ಯಾಗ್ರಹ ಕೈಗೊಂಡಿದ್ದ ಸಂದರ್ಭದಲ್ಲಿ ಅಂದು ಶಕುಂತಲಾರವರು ಚಳುವಳಿಯಲ್ಲಿ ಭಾಗವಹಿಸಿ ಎಲ್ಲಡೆ ಪ್ರಚಾರ ಆಂದೋಲವನ್ನು ಕೈಗೊಂಡರು. ಮರುದಿನವೇ ಶಕುಂತಲಾರವರು ತಮ್ಮ ಕಾಲೇಜು ಹುಡಗಿಯರು ಮತ್ತು ಸ್ನೇಹಿತರೊಂದಿಗೆ ಅಂಗಡಿಗಳ ಮುಂದೆ ನಿಂತು ಪಿಕೆಟಿಂಗ್ ಕಾರ್ಯಕ್ರಮವನ್ನು ನಡೆಸಿದರು. ಮುಂಬೈಯಿಂದ ಆಗಮಿಸಿದ ಡಾ. ನಾಥ ಪೈರವರು ಬೆಳಗಾವಿಗೆ ಬಂದಿದ್ದರು. ಅಂದೇ ಶಕುಂತಲಾರವರು ಶಾಲೆಯನ್ನು ತ್ಯಜಿಸಿ ಕಾಲೇಜು ಹುಡುಗಿಯರೊಂದಿಗೆ ಅಂಗಡಿ ಮುಂಗಟ್ಟುಗಳನ್ನು ಮುಚ್ಚುವ ಮೆರವಣಿಗೆಯನ್ನು ಆರಂಭಿಸಿದರು. ಪುರುಷರ ಪರವಾಗಿ ನಾಥ ಪೈರವರು ನಿಂತರೆ ಮಹಿಳೆಯರ ಪರವಾಗಿ ಶಕುಂತಲಾರವರು ಬೆಂಬಲ ಸೂಚಿಸಿ ಸ್ವಾತಂತ್ರ್ಯ ಹೋರಾಟದ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸುಮಾರು 118 ಕಾಲೇಜು ವಿದ್ಯಾರ್ಥಿಗಳನ್ನು ಬಂಧಿಸಲಾಯಿತು ಮತ್ತು ಉಳಿದ ಇತರೆ ವಿದ್ಯಾರ್ಥಿಗಳು ತಮ್ಮ ಮೆರವಣಿಗೆಯನ್ನು ಮುಂದುವರಿಸಿದರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವಿದ್ಯಾರ್ಥಿಗಳಲ್ಲಿ ಬಂಧಿತರಾದ ಮೊದಲಿಗರೇ ಶಕುಂತಲಾರವರು, ಇದು ಅಪ್ಪಟ ಹೋರಾಟಗಾರ್ತಿಯೊಬ್ಬರು ಸ್ವತಃ ತಮ್ಮನ್ನು ತಾವೇ ಸ್ವಾತಂತ್ರ್ಯ ಹೋರಾಟಕ್ಕೆ ಅರ್ಪಣೆಮಾಡಿಕೊಂಡ ರೀತಿಯನ್ನು ಸ್ಪಷ್ಟೀಕರಿಸುತ್ತದೆ. ಶಕುಂತಲಾರವರನ್ನು ಬಂಧಿಸಿದರೂ

ಸಹ ತನ್ನ ಕೈಯಲ್ಲಿ ಹಿಡಿದಿದ್ದ ತ್ರಿವರ್ಣ ಧ್ವಜವನ್ನು ಬಿಟ್ಟಿರಲಿಲ್ಲ. ನಾಲ್ಕು ದಿನದಲ್ಲಿ ಎಲ್ಲರನ್ನು ಬಿಡುಗಡೆ ಮಾಡಲು ಸೂಚನೆ ದೊರೆತು ಬಂಧನಮುಕ್ತರಾಗಿ ಬಿಡುಗಡೆಯಾದ ಶಕುಂತಲಾರವರು ತಡಮಾಡದೆ ಹೋರಾಟದ ತೀವ್ರತೆ ಎಲ್ಲಡೆ ಹಬ್ಬಿರುವಾಗಲೇ ಭೂಗತರಾಗಿ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳನ್ನು ಮುಂದುವರಿಸಲು ನಿರ್ಧಾರ ಕೈಗೊಂಡರು.

ಸರ್ಕಾರದ ವಿರೋಧಿ ಕಾರ್ಯಕ್ರಮಗಳು, ಕ್ರಾಂತಿಕಾರಿಗಳಿಗೆ ಮಾಹಿತಿ ನೀಡುವುದು ಮತ್ತು ಅವರಿಗೆ ಅಗತ್ಯವಾಗಿ ಬೇಕಾದ ಸಾಮಗ್ರಿಗಳ ಪೂರೈಕೆ ವ್ಯವಸ್ಥೆಯನ್ನು ಕಲ್ಪಿಸುವುದು ಮುಂತಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಇವುಗಳಲ್ಲದೆ ಹೋರಾಟದ ಹಿನ್ನಲೆಯಾಗಿ ರಾಷ್ಟ್ರೀಯ ಮುಂಖಡರುಗಳ ಹುಟ್ಟು ಹಬ್ಬಗಳನ್ನು ಆಚರಿಸುವುದು, ರಾಷ್ಟ್ರೀಯ ದಿನಗಳ ಆಚರಣೆ ಮತ್ತು

ಸೇವಾದಳದ ಚಟುವಟಿಕೆಗಳನ್ನು ಆಯೋಜಿಸುವುದು ಇನ್ನು ಮುಂತಾದ ಕಾರ್ಯಗಳು ಇವರ ದೈನಂದಿನ ಚಟುವಟಿಕೆಗಳಾಗಿದ್ದವು. ಈ ಎಲ್ಲ ಹಿನ್ನೆಲೆಯಿಂದಾಗಿ ಶಕುಂತಲಾರವರ ಮೇಲೆ ಪೊಲೀಸರು ಕಣ್ಣುಗಾವಲನ್ನು ಪ್ರಾರಂಭಿಸಿದ್ದರು. ಆಕೆಯ ಮನೆಯನ್ನು ಪೊಲೀಸರು ಆಗಾಗ ಶೋಧಿಸುತ್ತಿದ್ದರು. ಖಾದಿ ಅಭಿಯಾನ, ಹಿಂದಿ ಪ್ರಚಾರ, ಚರಕ ಅಭಿಯಾನ ಮುಂತಾದವುಗಳನ್ನು ಮಹಾರಾಷ್ಟ್ರದ ಸ್ವಾತಂತ್ರ್ಯ ಹೋರಾಟಗಾರ ಸಹಕಾರದೊಂದಿಗೆ ಬೆಳಗಾವಿಯಲ್ಲಿ ಮುಂದುವರೆಸಿದರು.

ಶಕುಂತಲಾರವರ ನೇತೃತ್ವದಲ್ಲಿ 1942ರ ಆಕ್ಟೋಬರ್ 2ರಂದು ವಿದ್ಯಾರ್ಥಿಗಳು ಬೆಳಗಾವಿ ಜಿಲ್ಲೆಯ ಟಿಕಲವಾಡಿಯಲ್ಲಿ ಇಂಗ್ಲೆಂಡಿನ ಪ್ರಧಾನಿ ವಿನ್ಸ್ಟನ್ ಚರ್ಚಿಲ್‌ರವರ ಪ್ರತಿಕೃತಿಯನ್ನು ದಹಿಸಿದರು. ಈ ಸಂದರ್ಭದಲ್ಲಿ ಎರಡನೇ ಭಾರಿಗೆ ಶಕುಂತಲಾರವರು ಬಂಧನಕ್ಕೆ ಒಳಗಾದರು. ಇದು ವಿದ್ಯಾರ್ಥಿಗಳಲ್ಲಿ ಮತ್ತಷ್ಟು ಆಕ್ರೋಶವನ್ನು ಉಂಟುಮಾಡಿತು. ವಿದ್ಯಾರ್ಥಿಗಳು ತಮ್ಮ ದಿನನಿತ್ಯದ ಹೋರಾಟವನ್ನು ನಿಲ್ಲಿಸದೆ ಮುಂದುವರಿಸಿದರು. ಹೋರಾಟ ಮುಂದುವರೆದಂತೆಲ್ಲ ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಹಾಗೂ ಸಾಮಾನ್ಯ ಜನರನ್ನು ಬಂಧಿಸಲಾಯಿತು. ಬಂಧನಗಳು ನಿರಂತರವಾದಂತೆ ಜೈಲುಗಳು ಸಹ ತುಂಬಿ ಹೋದವು. ಆದರೂ ಬಂಧನಗಳು ನಿಲ್ಲಲಿಲ್ಲ ಹಾಗೆಯೇ ಹೋರಾಟಗಳು ಸಹ ನಿರಂತರವಾಗಿ ಮುಂದುವರೆಯುತ್ತಿದ್ದವು. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದ ನ್ಯಾಯಾಧೀಶರು ಶಕುಂತಲಾರವರನ್ನು ಒಂದುವರೆ ತಿಂಗಳುಗಳ ಕಾಲ ವಿಚಾರಣಾಧೀನ ಖೈದಿಯಾಗಿ ಬಂಧಿಸಿದರು ಮತ್ತು ಒಂದು ತಿಂಗಳ ಕಠಿಣ ಶಿಕ್ಷೆಯನ್ನು ಘೋಷಿಸಿದರು. ಶಿಕ್ಷೆಯ ಅವಧಿ ಪೂರ್ಣಗೊಂಡು ಶಕುಂತಲಾರವರನ್ನ ಬಿಡುಗಡೆ ಮಾಡುವ ಸಂದರ್ಭದಲ್ಲಿ ಎಲ್ಲ ರಾಷ್ಟ್ರೀಯ ದಿನಗಳಂತೆ ಒಂದು ವಾರ ಮುಂಚಿತವಾಗಿಯೇ ಖೈದಿಗಳನ್ನು ಬಿಡುಗಡೆ ಮಾಡುವ ಮತ್ತು ಹೋರಾಟಗಾರರನ್ನು ಒಂದು ವಾರ ಮುಂಚಿತವಾಗಿಯೇ ಬಂಧಿಸುವ ಪರಿಪಾಠವಿತ್ತು.

ರಾಮಚಂದ್ರ ಮಾಧವಿ ಶಂಕರ ಕುರ್ತುಕೋಟಿ ಮುಂತಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಶಕುಂತಲ ರವರು ಭೂಗತವಾಗಿ ಸ್ವಾತಂತ್ರ್ಯ ಹೋರಾಟಗಾಗರಿಗೆ ನೀಡುವ ಆಹಾರ, ವಸತಿ ಮತ್ತು ವೈದ್ಯಕೀಯ ನೆರವನ್ನು ಮುಂದುವರೆಸಿದರು. 1944ರಲ್ಲಿ ಶಂಕರ ಕುರ್ತುಕೋಟಿಯವರನ್ನು ರಾಮಚಂದ್ರ ವಡವಿ ಅವರು ಶಕುಂತಲಾರವರಿಗೆ ಪರಿಚಯಿಸಿದರು. ಮುಂದೆ ಇವರಿಬ್ಬರ ನಡುವೆ ಸೌಹಾರ್ದ ಸ್ನೇಹ ಏರ್ಪಟ್ಟು ಶಕುಂತಲಾರವರ ಹೋರಾಟಕ್ಕೆ ಶಂಕರ ಕುರ್ತುಕೋಟಿಯವರು ಮಾರ್ಗದರ್ಶಕರಾಗಿ ನಿಂತರು. ಭೂಗತ ಸ್ವಾತಂತ್ರ್ಯ ಹೋರಾಟಗಾರರಿಗೆ ನೆರವು ನೀಡುತ್ತಿರುವುದನ್ನು ಗಮನಿಸಿದ ಪೊಲೀಸರು ಶಂಕರ್ ಕುರ್ತುಕೋಟಿಯವರ ಬಂಧನಕ್ಕೆ ಕರೆ ನೀಡಿ ಬಂಧನಕ್ಕೆ ಸಹಕರಿಸಿದವರಿಗೆ ಬಹುಮಾನ ಮೊತ್ತವನ್ನು ಸಹ ಘೋಷಿಸಿ ಅವರನ್ನು ಹಿಡಿದುಕೊಟ್ಟವರಿಗೆ ಅಥವಾ ಅದಕ್ಕೆ ಸಹಕರಿಸಿದವರಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಘೋಷಿಸಿದರು. ಇದನ್ನು ತಿಳಿದ ಶಕುಂತಲಾರವರು ಮುಂದಿನ ಹೋರಾಟದ ಬಗ್ಗೆ ಸಾಕಷ್ಟು ಚರ್ಚೆಗಳನ್ನು ಮಾಡಿದ್ದರು. ಶಂಕರ್ ರವರ ಸ್ನೇಹ ಮತ್ತು ಹೋರಾಟದ ಪ್ರವೃತ್ತಿ ಇವರಿಬ್ಬರನ್ನು ಬಾಳ ಸಂಗಾತಿಗಳಾಗುವಂತೆ ಮಾಡಿತು. ಸರ್ಕಾರದ ಬಂಧನದ ಸುದ್ದಿಯ ನಡುವೆಯೇ ದಿನಾಂಕ 15 ಫೆಬ್ರವರಿ 1944ರಂದು ಇವರಿಬ್ಬರು ಸರಳವಾಗಿ ವಿವಾಹವನ್ನು ಮಾಡಿಕೊಂಡರು. ವಿವಾಹಕ್ಕೂ ಮುನ್ನ ಶಂಕರ್ ಕುರ್ತುಕೋಟಿಯವರು ಶಕುಂತಲಾರವರ ಬಳಿ ನಾನು ಒಂದು ವೇಳೆ ಸೆರೆ ಸಿಕ್ಕಿ 15 ರಿಂದ 20 ವರ್ಷಗಳ ಕಾಲ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಅಥವಾ ನನಗೆ ಮರಣದಂಡನೆ ವಿಧಿಸಬಹುದು ಎಂಬ ಮುಂದಿನ

ಭವಿಷ್ಯದ ಆತಂಕವನ್ನು ವ್ಯಕ್ತಪಡಿಸಿದಾಗ ಮರು ಮಾತನಾಡದ ಶಕುಂತಲಾರವರು ಮುಂದಿನ ಹೋರಾಟದ ವಿಷಯಗಳಿಗೆ ಮಾತ್ರ ನಮ್ಮ ಭವಿಷ್ಯವನ್ನು ಮೀಸಲಿಡಬೇಕೇ ವಿನಃ ಶಿಕ್ಷೆ, ಮರಣದಂಡನೆ ಮುಂತಾದವುಗಳ ಬಗ್ಗೆ ವಿಷಾದವನ್ನು ಮಾಡಬಾರದೆಂದು ತಿಳಿಸಿ ನಿಗಧಿಯಂತೆ ಫೆಬ್ರವರಿ 15ರಂದು ಮುಂಬೈನಲ್ಲಿ ಭೂಗತ ಸ್ವಾತಂತ್ರ್ಯ ಹೋರಾಟದ ಸಹಪಾಠಿಗಳಾಗಿದ್ದ 40 ಜನರ ಹಾಗೂ ಪ್ರಮುಖ ಹೋರಾಟಗಾರರಾದ ರಂಗನಾಥ ದಿವಾಕರ್ ಅಚ್ಚುತ್‌ಪಟುವರ್ಧನ್ ಹೆಚ್.ಎಂ ಜೋಶಿ ಮತ್ತು ರಾಮಚಂದ್ರ ವಡವಿ ಯವರುಗಳ ಸಮ್ಮುಖದಲ್ಲಿ ವಿವಾಹ ನೆರವೇರಿಸಿದ್ದರು. [3]

ಸರ್ಕಾರವು ಇವರ ಬಂಧನಕ್ಕೆ ಪ್ರಯತ್ನವನ್ನು ಮಾಡುತ್ತಿದ್ದ ಸಂದರ್ಭದಲ್ಲಿ ನಡೆದ ಈ ವಿವಾಹ ಕಾರ್ಯಕ್ರಮವು ಅವರನ್ನು ಮತ್ತಷ್ಟು ತಲೆಕೆಡಿಸಿಕೊಳ್ಳುವಂತೆ ಮಾಡಿತು. ಆದರೂ ಅವರನ್ನು ಬಂಧಿಸುವ ಪ್ರಯತ್ನಗಳು ನಿರಂತರವಾಗಿ ಮುಂದುವರೆಯುತ್ತಿದ್ದವು. ಅಂತಿಮವಾಗಿ ಪೋಲೀಸರು ಶಂಕರ್ ಕುರ್ತುಕೋಟಿಯವರನ್ನು ಏಪ್ರಿಲ್ ತಿಂಗಳಿನಲ್ಲಿ ಬೆಳಗಾವಿಯಲ್ಲಿ ಬಂಧಿಸಿದರು. ಇವರೆಲ್ಲರ ಹೋರಾಟದ ಫಲವಾಗಿ ಭಾರತದ ಸ್ವಾತಂತ್ರ್ಯ ಹೋರಾಟವು ಅಂತಿಮ ಘಟ್ಟವನ್ನು ತಲುಪಿ 1947ರಲ್ಲಿ ಸ್ವಾತಂತ್ರ್ಯವನ್ನು ಗಳಿಸಿಕೊಂಡಿತು. ಈ ಹೋರಾಟಗಳ ಹಿನ್ನೆಲೆಯನ್ನು ಗಮನಿಸಿದಾಗ ಬೆಳಗಾವಿ ಜಿಲ್ಲೆಯ ಹೋರಾಟಗಾರರ ಪಾತ್ರ ಅವಿಸ್ಮರಣೀಯವಾದುದು. ಅಂತಿಮವಾಗಿ ಭಾರತವು ಸ್ವಾತಂತ್ರ್ಯವನ್ನು ಗಳಿಸಿದ ನಂತರ ಶಂಕರ್ ಕುರ್ತುಕೋಟಿಯವರನ್ನು ಬಿಡುಗಡೆ ಮಾಡಲಾಯಿತು.

[3] ಬಾಯಾ ದೇಶಪಾಂಡೆ. (1973). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ, ಸಂಪುಟ–1.* ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.

1947ರಲ್ಲಿ ಭಾರತ ಸ್ವಾತಂತ್ರ್ಯ ಗಳಿಸಿದ ಸಂದರ್ಭ ಇಡೀ ದೇಶದಾದ್ಯಂತ ಬ್ರಿಟಿಷರ ದಾಸ್ಯದಿಂದ ಮುಕ್ತಗೊಳಿಸಿದ ಭಾರತದ ಸ್ವಾತಂತ್ರ್ಯ ಸವಿಯನ್ನು ಎಲ್ಲರಿಗೂ ಹಂಚುವ ಗಳಿಗೆ ಆದರೆ ಇದೇ ಸಂದರ್ಭದಲ್ಲಿ ದೇಶದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆಗಳಾಗುತ್ತಿದ್ದವು. ಸಮಾಜ ಮತ್ತು ರಾಜಕೀಯದ ಬಗ್ಗೆ ದೂರದೃಷ್ಠಿಯನ್ನು ಹೊಂದಿದ್ದ ಶಕುಂತಲಾರವರು ರಾಜಕೀಯವಾಗಿ ಮಹಿಳೆ ಬೆಳೆಯಲು ಸಹಕರಿಸಿದ್ದರು. ಇದಕ್ಕಾಗಿ ಕರ್ನಾಟಕದಲ್ಲಿ ಹಲವಾರು ಮಹಿಳಾ ಸಂಘಟನೆಗಳು ಮತ್ತು ಸಂಸ್ಥೆಗಳ ಸ್ಥಾಪನೆಯಲ್ಲಿ ಇವರ ಪಾತ್ರ ಪ್ರಮುಖವಾಗಿದೆ. ಶಕುಂತಲಾರವರು ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಇದು ರಾಜ್ಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನುಉತ್ತೇಜಿಸಲು ಸಹಕಾರಿಯಾಯಿತು.[4]

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬೆಳಗಾವಿ ವಿಭಾಗ ಅದ್ಭುತ ಪಾತ್ರವನ್ನು ನಿರ್ವಹಿದೆ. ಕಿತ್ತೂರು ರಾಣಿ ಚೆನ್ನಮ್ಮ 1824ರಲ್ಲಿ ಬ್ರಿಟೀಷರ ವಿರುದ್ಧ ಹೋರಾಟ ನಡೆಸಿದ್ದಾರೆ ಎಂಬುದನ್ನು ಗಮನಿಸಿದಾಗ ಬೆಳಗಾವಿ ವಿಭಾಗದಿಂದಲೇ ಮೊಟ್ಟ ಮೊದಲ ಸ್ವಾತಂತ್ರ್ಯ ಹೋರಾಟ ಕರ್ನಾಟಕದಲ್ಲಿ ಪ್ರಾರಂಭವಾಗಿರುವುದು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಸಾವಿರಾರು ಮಹಿಳೆಯರು ಪಾಲ್ಗೊಂಡು ಸೆರೆಮನೆ ಶಿಕ್ಷೆಯನ್ನು ಅನುಭವಿಸಿದ್ದಾರೆ. ಬೆಳಗಾವಿ ಜಿಲ್ಲೆಯ ಸ್ತ್ರೀಯರು ತಮ್ಮ ಪಾಲಿನ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸಿರುವುದು ಇತರ ಮಹಿಳೆಯರಿಗೆ ಶೋಭಿಸುವ ಹಾಗೆ ಹಾಗೂ ಕೀರ್ತಿ ತರುವ ಹಾಗೆ ಮಾಡಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ತನು ಮನ ಧನದಿಂದ ಹಾಗೂ ಯಾವುದೇ ಪ್ರತಿಫಲ ಅಪೇಕ್ಷೆ ಇಲ್ಲದೆ ಹೋರಾಟವನ್ನು ಮಾಡುತ್ತಾ ತಮ್ಮನ್ನು

[4] ಆಲೂರು ವೆಂಕಟರಾವ್. (1941). *ನನ್ನ ಜೀವನ ಸ್ಮೃತಿಗಳು.* ಬೆಳಗಾವಿ ರಾಮಚಂದ್ರರಾಯರು.

ತಾವು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ತಮ್ಮ ಪತಿ ಸೆರೆಮನೆಗೆ ಸೇರಿದ್ದರು. ಸಂಸಾರದ ಮೋಹ ಬಿಟ್ಟು ಸ್ವಾತಂತ್ರ್ಯಕ್ಕಾಗಿ ಟೊಂಕ ಕಟ್ಟಿ ದುಡಿದಿದ್ದಾರೆ. ದೇಶ ಸೇವಕಿಯರು ಮನೆ ಮನೆಗೆ ಹೋಗಿ ಉಪ್ಪನ್ನು ಮಾರಾಟ ಮಾಡಿದ್ದಲ್ಲದೇ ಖಾದಿ ಮತ್ತು ಸ್ವದೇಶಿ ವಸ್ತುಗಳ ಪ್ರಚಾರವನ್ನು ಮಾಡಿದ್ದಾರೆ. ಸ್ವದೇಶಿ ವಸ್ತುಗಳ ಪ್ರಚಾರಕ ಮಂಡಳಿ ಎಂಬ ಸಂಸ್ಥೆಯ ಮುಖಾಂತರ ಜನರಿಗೆ ಸ್ವದೇಶಿ ವಸ್ತುಗಳನ್ನು ಪೂರೈಸುವ ಏರ್ಪಾಟು ಮಾಡಿದ್ದಾರೆ. ಮನೆ ಮನೆಗೆ ಚರಕಗಳನ್ನು ಹಂಚಿ ನೂಲನ್ನು ತಯಾರಿಸುವ ಸ್ಪರ್ಧೆಯನ್ನು ಏರ್ಪಡಿಸಿ ಮಹಿಳೆರು ಮಾಡಿದ ಈ ಕಾರ್ಯದಲ್ಲಿ ಪುರುಷರಿಗಿಂತ ಯಾವ ವಿಧದಲ್ಲೂ ಕಡಿಮೆ ಇಲ್ಲ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ಮಹಿಳೆಯರ ಈ ಅದ್ಭುತ ಕಾರ್ಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸ್ಫೂರ್ತಿಯ ಚಿಲುಮೆಯಂತೆ ಪ್ರೇರೇಪಿಸಿದೆ.

ಇತಿಹಾಸದ ಬರವಣಿಗೆಗಳಲ್ಲಿ ಮಹಿಳೆಯು ಪುರುಷನಿಗೆ ಸಮ ಎಂಬಂತೆ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ ಆದರೆ ಆಕೆಗೆ ಪೂರ್ಣ ಪ್ರಮಾಣದಲ್ಲಿ ಬೆಂಬಲ ಮತ್ತು ಸಹಕಾರ ದೊರೆಯದ ಕಾರಣ ಮಹಿಳೆಯರ ಹೋರಾಟದ ಇತಿಹಾಸ ಎಂಬುದು ಚರಿತ್ರೆಯಲ್ಲಿ ಚಾರಿತ್ರಿಕವಾಗಿ ದಾಖಲಾಗದೆ ಹುದುಗಿ ಹೋಗಿದೆ. ವಿಪರ್ಯಾಸವೆಂಬಂತೆ ಬೆರಳೆಣಿಕೆಯಷ್ಟು ಮಹಿಳಾ ಹೋರಾಟಗಾರರ ಇತಿಹಾಸ ಮಾತ್ರವೇ ದಾಖಲಾಗಿ ನಮಗೆ ದೊರೆಯುತ್ತಿರುವುದು. ಅದು ಸಹ ಆಧುನಿಕ ಕಾಲಘಟ್ಟದಲ್ಲಿ ಇಂಗ್ಲಿಷ್ ಶಿಕ್ಷಣ ಅಥವಾ ಇಂಗ್ಲಿಷ್ ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಪುರುಷರು ಸ್ವಲ್ಪಮಟ್ಟಿಗೆ ಹೆಣ್ಣಿನ ಶಿಕ್ಷಣ ಮತ್ತು ಅವರ ಸಮಾನ ಅವಕಾಶಗಳ ಕಡೆಗೆ ಗಮನವನ್ನು ನೀಡಿದ್ದಾರೆ ಆದ ಕಾರಣ ಹೆಣ್ಣಿಗೂ ಸ್ವಾತಂತ್ರ್ಯ, ಸಮಾನತೆ, ಶಿಕ್ಷಣ ಮತ್ತು ಉದ್ಯೋಗ ಮುಂತಾದ ಕ್ಷೇತ್ರಗಳಿಗೂ ಪಾದರ್ಪಣೆ ಮಾಡಲು ಸ್ತ್ರೀಗೂ ಸಾಧ್ಯವಾಗಿದೆ.

ಭಾರತದ ಸ್ವಾತಂತ್ರ್ಯ ಹೋರಾಟದ ಗತಿಯನ್ನು ಗಮನಿಸಿದಾಗ ಗಾಂಧೀಜೀಯವರು ಹೋರಾಟಕ್ಕೆ ಪಾರ್ದಾಪಣೆ ಮಾಡಿದ ನಂತರ ಮಹಿಳೆಯರು ಸಹಾ ಹೆಚ್ಚಿನ ಸಂಖ್ಯೆಯಲ್ಲಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡರು. ಅವರಲ್ಲದೆ ರೈತರು, ಕಾರ್ಮಿಕರು ವಿದ್ಯಾರ್ಥಿಗಳು ಹಾಗೂ ಮಹಿಳೆಯರು ಕ್ರಿಯಾಶೀಲವಾಗಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಪಾಲ್ಗೊಂಡಿರುವುದನ್ನು ನಾವು ಗುರ್ತಿಸಬಹುದಾಗಿದೆ. ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾರತೀಯ ಪ್ರತಿಯೊಬ್ಬ ನಾಗರಿಕರು ಪಾಲ್ಗೊಳ್ಳಬೇಕೆಂಬ ಆಸೆಯನ್ನು ವ್ಯಕ್ತಪಡಿಸಿ ಎಲ್ಲರನ್ನು ಒಳಗೊಂಡಂತೆ ಸಾಮೂಹಿಕ ಸತ್ಯಾಗ್ರಹಗಳನ್ನು ಹಮ್ಮಿಕೊಂಡು ಎಲ್ಲರಿಗೂ ಭಾಗವಹಿಸುವ ಅವಕಾಶವನ್ನು ಕಲ್ಪಸಿದ್ದರಿಂದ ಶಕುಂತಲಾ ಕುರ್ತುಕೋಟಿಯವರಂತಹ ಅನೇಕ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರನ್ನು ಇಂದು ನೆನಸಿಕೊಳ್ಳಲು ಸಾಧ್ಯವಾಗುತ್ತಿದೆ.

ಸುಮಾರು 30 ವರ್ಷಗಳ ಸುಧೀರ್ಘವಾದ ರಾಜಕೀಯ ಕ್ಷೇತ್ರದಲ್ಲಿ ದುಡಿದ ಶಕುಂತಲಾರವರು ಸ್ವಾತಂತ್ರ್ಯ ಹೋರಾಟದ ನಂತರ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿ ಮಹಿಳಾ ಅಭಿವೃದ್ಧಿ ಪರವಾಗಿ ಅನೇಕ ಕಾರ್ಯಗಳನ್ನು ಕೈಗೊಂಡು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ ಎಂಬುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ. ಹೀಗೆ ಸ್ವಾತಂತ್ರ್ಯ ಹೋರಾಟ ಮತ್ತು ರಾಜಕೀಯ ಕ್ಷೇತ್ರದಲ್ಲಿ ತಮ್ಮದೆಯಾದ ಛಾಪು ಮೂಡಿಸಿದ್ದ ಇವರು 2004ರಲ್ಲಿ ವಿಧಿವಶರಾದರು. ಈ ಮೂಲಕ ತಮ್ಮ ಸುದೀರ್ಘವಾದ ಹೋರಾಟದ ಬದುಕನ್ನು ಅರ್ಥಪೂರ್ಣವಾಗಿ ಮುಗಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಇವರ ಸಾಧನೆ ಇವರು ತೋರಿದ ಧೈರ್ಯ ತ್ಯಾಗ ಸಮರ್ಪಣಾ ಮನೋಭಾವ ಮುಂದಿನ ಭವಿಷ್ಯ ಭಾರತದ ಯುವ ಪೀಳಿಗೆಗೆ ಮಾದರಿಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಆಲೂರು ವೆಂಕಟರಾವ್. (1957). *ಕರ್ನಾಟಕತ್ವದ ವಿಕಾಸ.* ನವಜೀವನ ಗ್ರಂಥ ಭಂಡಾರ.
- ಆರ್ಯ ಮಿಂಚ್ ಮಲ್ಲಿಕಾರ್ಜುನ. (2011). *ಬ್ರಿಟಿಷರ ಆಡಳಿತ ಮತ್ತು ರಾಣಿ ಕಿತ್ತೂರು ಚೆನ್ನಮ್ಮ.* ಕನ್ನಡ ಸಾಹಿತ್ಯ ಪರಿಷತ್ತು.
- ಬಾಯಾ ದೇಶಪಾಂಡೆ. (1973). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ, ಸಂಪುಟ–1.* ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.
- ಬುರ್ಲಿ ಬಿಂದು ಮಾಧವ. (1939) *ಭಾರತೀಯ ಸ್ವಾತಂತ್ರ್ಯದ ಹೆಜ್ಜೆಗಳು.*
- ಕುಲಕರ್ಣಿ, ಆರ್.ಎಚ್. (1992). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ.* ವೆಂಕಟೇಶ್ವರ ಪ್ರಕಾಶನ.
- ನಾಗರತ್ನಮ್ಮ ಎಸ್. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರೀಕ ಕಾನೂನು ಭಂಗ ಚಳುವಳಿ.* ದೇಶಿ ಪುಸ್ತಕ ಪ್ರಕಾಶನ.
- ಸಿದ್ದವ್ವನ ಹಳ್ಳಿ ಕೃಷ್ಣಶರ್ಮ. (1968). *ಗಾಂಧೀ ಮತ್ತು ಕರ್ನಾಟಕ.* ಗಾಂಧೀ ಸ್ಮಾರಕ ನಿಧಿ.
- ಸೂರ್ಯನಾಥ್ ಕಾಮತ್ ಮತ್ತು ದಾನಿ ಸುರೇಂದ್ರ. (1988). *ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು.*
- ಸೂರ್ಯನಾಥ್ ಕಾಮತ್. (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ–1.*
- ಸೂರ್ಯನಾಥ್ ಕಾಮತ್. *ಬೆಳಗಾಂ ಜಿಲ್ಲಾ ಗೆಜಿಟೆರ್.*
- ಆಲೂರು ವೆಂಕಟರಾವ್. (1941). *ನನ್ನ ಜೀವನ ಸ್ಮೃತಿಗಳು.* ಬೆಳಗಾವಿ ರಾಮಚಂದ್ರರಾಯರು.
- ಉಮಾದೇವಿ ಕಣವಿ (ಸಂ.) (19420. *ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ ಒಂದು ಐತಿಹಾಸಿಕ ಅಧ್ಯಯನ.*
- ಟಿ. ಟಿ. ಶರ್ಮಾ. (1973). *ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ.* ಪುರೋಗಾಮಿ.
- ಹಾಲಪ್ಪ ಈ.ಎಸ್ ಮತ್ತು ಕೃಷ್ಣ ರಾವ್. (ಸಂ). (1962). *ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ.* ಸಂಪುಟ–1